


■ ಕಂನಾಡಿಗಾ ನಾರಾಯಣ
ಕಲೆ: ಎಚ್.ಎಸ್. ಮೋನಪ್ಪ

# ನೋವಿನ ಗರ್ಭದಿಂದ ಉದಿಸಿದ ಬೆಳುದಿಂಗಳು

ಗಾಬರಿಗೊಂಡು ದಿಢೀರನೆ ಎಚ್ಚರಗೊಂಡೆ. ಶುದ್ಧೋದನ ಶುಭ್ರವಾದ ನಿದ್ರಾದೇವಿಯ ಮಡಿಲ ಆಲಿಂಗನದಲ್ಲಿ ಮೈಮರೆತು ಮಲಗಿ ಕನಸು ಕಾಣುತ್ತಿದ್ದರು. ಯಾವುದೋ ಸುಖದ ಕನಸು ಕಾಣುತ್ತಿರುವ ಎಳೆಯ ಮಗುವಿನಂತೆ ಕನಸಿನಲ್ಲೇ ಮುಗುಳ್ನಗುತ್ತಿದ್ದರು. ಅವರನ್ನು ಎಬ್ಬಿಸಿ ನಿದ್ರಾಭಂಗ ಮಾಡಬಾರದೆಂದು ಮಂಚದ ಪಕ್ಕದ ಚಿಕ್ಕ ಕುರ್ಚಿಯ ಮೇಲೆ ಇಟ್ಟಿದ್ದ ಗಿಂಡಿಗೆಯಿಂದ ನೀರನ್ನು– ಲೋಟಕ್ಕೆ ಬಗ್ಗಿಸಿಕೊಂಡು ಕುಡಿಯುವಷ್ಟೂ ತಾಳ್ಮೆಯಿಲ್ಲದೇ– ಗಟಗಟನೆ ಕುಡಿದೆ. ಆತಂಕದಿಂದ ನನ್ನೆದೆ ಇನ್ನೂ ಬಡಿಯುತ್ತಲಿತ್ತು. ನನ್ನ ಎದೆಬಡಿತ ಕೇಳಿತೇನೋ ಎಂಬಂತೆ ಶುದ್ಧೋದನರು ಎದ್ದುಬಿಟ್ಟರು. ಧಾವಂತದಿಂದ ನನಗೆ ಬಿದ್ದ ಕನಸಿನ ಕುರಿತು ಹೇಳುತ್ತಲಿದ್ದೆ. ಬೆವೆತು ಕುಡಿಯೊಡೆದಿದ್ದ ಬೆವರನ್ನೂ, ಅವಸರದಲ್ಲಿ ಕುಡಿದಾಗ ಚೆಲ್ಲಿದ ನೀರನ್ನೂ ವಸ್ತ್ರದಿಂದ ಒರೆಸಿ ಸಮಾಧಾನ ಮಾಡಿದರು. ತೀವ್ರ ಉಸಿರಾಟವನ್ನು ತಹಬಂದಿಗೆ ತಂದುಕೊಂಡು ಅವರ ತೊಡೆಯನ್ನೇ ಆಸರೆಯಾಗಿರಿಸಿಕೊಂಡು, ಅವರೊಡನೆ ಅದೂ ಇದೂ ಮಾತನಾಡುತ್ತಿದ್ದರೂ ಅದು ಶುಭದ ಕನಸೋ, ಅಶುಭದ ಕನಸೋ ಎಂದು ಮನದೊಳಗೇ ಎಣಿಸುತ್ತ ನಿದ್ದೆಗಣ್ಣಲ್ಲಿ ಕಣ್ಣು ಬಿಟ್ಟುಕೊಂಡು ಮಲಗಿದೆ. ಕ್ರಮೇಣ ನನಗರಿಯದೇ, ಹಾಗೆಯೇ ನಿದ್ದೆಗೆ ಜಾರಿಹೋಗಿದ್ದೆ.

ಬೆಳಗ್ಗೆ ಎದ್ದ ಕೂಡಲೇ ಕಾದಿದ್ದವಳಂತೆ ರಾತ್ರಿಯ ನನ್ನ ಕನಸನ್ನು ಮತ್ತೆ ವಿವರಿಸಿದೆ. ಇದರ ಅರ್ಥವೇನೆಂದು ಕೇಳಿದೆ. ಅವರಿಗಾದರೂ ಏನು ಗೊತ್ತು? ಎಂಟೂ ಜನ ಆಸ್ಥಾನ ವಿದ್ವಾಂಸರುಗಳನ್ನು ಕರೆಸಿದರು. ಅವರು ಪಂಚಾಂಗ ತೆಗೆದು ತಿಥಿ–ಗಳಿಗೆಗಳನ್ನೆಲ್ಲ

